# ಮಂಗಳೂರು ವಿಶ್ವವಿದ್ಯಾನಿಲಯ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಸಿದ್ಧಪಡಿಸಿದ
ಸ್ನಾತಕ ಅಧ್ಯಯನ ಮಂಡಳಿಯಲ್ಲಿ ಅನುಮೋದನೆಗೊಂಡಿರುವ ಸ್ನಾತಕ ಪದವಿಗಳ
ಕನ್ನಡ ಭಾಷಾ ಪಠ್ಯ, ಬಿ.ಎ. ಐಚ್ಛಿಕ ಕನ್ನಡ, ಮುಕ್ತ ಆಯ್ಕೆ ಹಾಗೂ ಕಡ್ಡಾಯ ಕನ್ನಡ
ಪಠ್ಯಕ್ರಮ 2021-2022ನೇ ಶೈಕ್ಷಣಿಕ ಸಾಲಿನಿಂದ ಅನ್ವಯ

**ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ**
**ಮಂಗಳೂರು ವಿಶ್ವವಿದ್ಯಾನಿಲಯ**
ಮಂಗಳಗಂಗೋತ್ರಿ - 574 199

# ಪ್ರಥಮ ಬಿ.ಎ./ಬಿಎಸ್‌ಡಬ್ಲ್ಯು
# ಬಿ.ಎ.(ಹೆಚ್‌ಆರ್‌ಡಿ)/ಬಿಎ(ಎಸ್‌ಡಿಎಸ್) ಕನ್ನಡ ಭಾಷಾ ಪಠ್ಯ

**BA / BSW/ HRD/ SDS Degree / Honours Degree Programme, Arts subjects**

ಮೊದಲ ಚತುರ್ಮಾಸ

| | |
|---|---|
| Course Title | ಬಿ.ಎ., ಬಿ.ಎಸ್.ಡಬ್ಲ್ಯೂ - ಕನ್ನಡ ಭಾಷಾ ಪಠ್ಯ |
| Total Contact Hourse : 52 to 56 | Course Credits : 03 |
| Formative Assessment Marks : 40 | Duration of ESA / Exam : 3 hours |
| Model Syllabus Authors : Multiple Authors | Summative Assessment Marks : 60 (SEE) |

| ವಿವರಗಳು | ಬೋಧನಾ ಅವಧಿ |
|---|---|
| ಘಟಕ - 1 ಕನ್ನಡ ನಾಡು ನುಡಿ ಚಿಂತನೆ | 13/14 |
| ಘಟಕ - 2 ಪ್ರಕೃತಿ | 13/14 |
| ಘಟಕ - 3 ಬಾಲ್ಯ | 13/14 |
| ಘಟಕ - 4 ಸಂಕೀರ್ಣ | 13/14 |

**ಘಟಕ -1 ಕನ್ನಡ ನಾಡು-ನುಡಿ-ಚಿಂತನೆ**

ಕಲಾ ಕನ್ನಡ ಪಠ್ಯವನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಅನುಗುಣವಾಗಿ ರೂಪಿಸಲಾಗಿದೆ. ಇಲ್ಲಿಯ ಮುಖ್ಯ ವಿಷಯಾಧಾರಿತ ಪಠ್ಯಕ್ರಮ. ಈ ಮೂಲಕ ಕಲಾ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಕೌಶಲ್ಯವನ್ನು ಕಲಿಸುವುದರ ಜೊತೆಗೆ ಕನ್ನಡ ಸಾಹಿತ್ಯ ಸಂಸ್ಕೃತಿಯ ವಿವಿಧ ಆಯಾಮಗಳನ್ನು ಪರಿಚಯಿಸುವುದು ಮುಖ್ಯ ಆಶಯವಾಗಿದೆ.

ಕನ್ನಡ ಭಾಷಾ ಕಲಿಕೆಯ ನಾಲ್ಕು ಆಯಾಮಗಳಾದ ಓದುವುದು, ಬರೆಯುವುದು, ಅರ್ಥ ಮಾಡಿಕೊಳ್ಳುವುದು, ಮಾತಾಡುವುದು ಇವುಗಳನ್ನು ಸಮರ್ಪಕವಾಗಿ ಕಲಿಸುವ ಪಠ್ಯದೊಂದಿಗೆ ಅಭ್ಯಾಸಗಳನ್ನು ರೂಪಿಸಲಾಗಿದೆ.

ವಿದ್ಯಾರ್ಥಿಗಳಲ್ಲಿ ಹೊಸ ಆಲೋಚನಾ ಕ್ರಮಗಳನ್ನು ರೂಪಿಸುವುದು, ವೈಚಾರಿಕ ಮನೋಭಾವವನ್ನು ಬೆಳೆಸುವುದು, ಪ್ರಾಯೋಗಿಕ ಚಿಂತನೆಗೆ ಒತ್ತು ಕೊಡುವುದು ಒಟ್ಟಾರೆಯಾಗಿ ಯುವ ಜನಾಂಗದ ಮನಸ್ಸನ್ನು, ವ್ಯಕ್ತಿತ್ವವನ್ನು ರೂಪಿಸುವುದು ಈ ಪಠ್ಯದ ಉದ್ದೇಶ. ಅದರೊಂದಿಗೆ ಕಲಾ ವಿದ್ಯಾರ್ಥಿಗಳು ಸೃಜನಶೀಲ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ಅಗತ್ಯವಾದ ಕೌಶಲ್ಯಾಧಾರಿತ ಪಠ್ಯ ಇದಾಗಿದೆ. ಇದಕ್ಕೆ ಪೂರಕವಾಗಿ ಪಠ್ಯವನ್ನು ವಿಷಯಾಧಾರಿತವಾಗಿ ರೂಪಿಸಲಾಗಿದೆ. ಈ ಮೂಲಕ ಬದುಕನ್ನು ಕುರಿತು ಸಮಗ್ರ ಗ್ರಹಿಕೆಯನ್ನು ವಿದ್ಯಾರ್ಥಿಗಳು ಪಡೆಯುವಲ್ಲಿ ಪಠ್ಯ ನೆರವಾಗುತ್ತದೆ.

ಕನ್ನಡ ನಾಡು ರೂಪುಗೊಂಡಿದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯ, ಭಾಷಾವಾರು ಪ್ರಾಂತ್ಯ ರಚನೆ ಏಕೀಕರಣ ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ವೋಪಜ್ಞತೆ, ಅದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಪಠ್ಯವನ್ನು ರೂಪಿಸಬೇಕು.

ಮೊದಲ ಘಟಕದಲ್ಲಿ ಕನ್ನಡ ನಾಡು ನುಡಿಗಳ ಇತಿಹಾಸ, ವೈಶಿಷ್ಟ್ಯ, ವೈಭವಗಳನ್ನು ಒಳಗೊಂಡ ಪರಿಚಯಿಸುವ ಪಠ್ಯಗಳನ್ನು ಇಲ್ಲಿ ನೀಡಲಾಗಿದೆ. ಇಂದಿನ ವಿದ್ಯುನ್ಮಾನ ಯುಗದಲ್ಲಿ ಸಾಹಿತ್ಯದಿಂದ ವಿಮುಖರಾಗುತ್ತಿರುವ ಯುವಪೀಳಿಗೆಗೆ ಸಾಹಿತ್ಯದ ಸಮಕಾಲೀನ ಔಚಿತ್ಯದ ಬಗ್ಗೆ ತಿಳಿಸುವುದು ಇಲ್ಲಿಯ ಮುಖ್ಯ ಆಶಯ. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಕವಿತೆ, ಲೇಖನಗಳನ್ನು ಇಲ್ಲಿ ಕೊಡಲಾಗಿದೆ.

**ಘಟಕ 2 : ಪ್ರಕೃತಿ**

ಮನುಷ್ಯ ಜೀವಿಯು ಪ್ರಕೃತಿಯ ಅವಿಭ್ಯಾಜ ಅಂಗ. ಪ್ರಕೃತಿ ಮತ್ತು ಮನುಷ್ಯರ ನಡುವಿನ ಅನ್ಯೋನ್ಯ ಸಂಬಂಧ ಇಂದಿನ ಅಗತ್ಯ ಪ್ರಕೃತಿಯನ್ನು ಮೂಲದೇವತೆಯೆಂದು ನೋಡುವ ಆರಾಧನಾ ನೆಲೆ ಅಥವಾ ಮಾತೃನೆಲೆ. ಎರಡನೆಯದು ಪ್ರಕೃತಿಯು ಮನುಷ್ಯರ ಉಪಭೋಗಕ್ಕಾಗಿಯೇ ಇದೆಯೆಂದು ನೋಡುವ ಭೋಗವಾದಿ ನೆಲೆ, ಮೂರನೆಯ ಮುಖ್ಯವಾದ ನೆಲೆ ಎಂದರೆ ಸೌಂದರ್ಯದ ನೆಲೆ. ಇದು ಕಲಾ ಮೀಮಾಂಸೆಯ ಜೊತೆಯಲ್ಲಿಯೇ ಬೆಳೆದು ಬಂದಿದೆ. ಈ ಮೂರು ನೆಲೆಗಳ ಜೊತೆಯಲ್ಲಿಯೇ ಪ್ರಕೃತಿಯು ಮನುಷ್ಯರಿಗೆ ಗುರುವೂ, ಮಾದರಿಯೂ ಆಗುವ ಹಲವು ಅಂಶಗಳು ಇವೆ. ಸಕಲ ಜೀವಜಾತಗಳನ್ನು ಪೊರೆಯುವ, ಬದುಕಲು ಅವಕಾಶ ಮಾಡಿಕೊಡುವ ಸಹಬಾಳ್ವೆಯ ಮೂಲಪಾಠವನ್ನು ಪ್ರಕೃತಿಯಿಂದ ಕಲಿಯಬೇಕಿದೆ. ಹಾಗೆಯೇ ನೆಲೆಯ ನಾಗರಿಕತೆಯ ಮೌಲ್ಯ ವ್ಯವಸ್ಥೆಯನ್ನೇ ಪುನರ್ ರಚಿಸಲು ಅವಕಾಶ ಮಾಡಿಕೊಡುತ್ತದೆ. ನಿತ್ಯನೂತನತೆಯ ನೆಲೆ, ಶಾಶ್ವತ ಮತ್ತು ನಶ್ವರತೆಯ ನೆಲೆ ಜೀವಪರತೆಯ ನೆಲೆ / ಕ್ರಿಯಾಶೀಲತೆಯ ನೆಲೆ ಇತ್ಯಾದಿ ಅಂಶಗಳನ್ನು ಒಳಗೊಳ್ಳುವ ಪಠ್ಯಗಳನ್ನು ಸೇರಿಸಿಕೊಳ್ಳಬಹುದು. ಪ್ರಕೃತಿಯೊಂದಿಗಿನ ಅನ್ಯೋನ್ಯ ಸಂಬಂಧವನ್ನು ಮರೆತರೆ ಅಪಾಯ ಕಟ್ಟಿಟದ್ದು. ಅತಿಯಾದ ನಗರೀಕರಣದ ಮತ್ತು ಭೋಗಲಾಲಸೆಯಿಂದ ನಿಸರ್ಗದಿಂದ ದೂರ ಸರಿಯುತ್ತಿರುವ ಮನುಷ್ಯನನ್ನು ಮತ್ತೆ ಅದರ ಬಳಿಗೆ ತರುವುದು ಅತ್ಯಂತ ಅಗತ್ಯ. ಆದ್ದರಿಂದ ಎರಡನೇ ಘಟಕದಲ್ಲಿ ಕನ್ನಡದ ವಿವಿಧ ಕವಿಗಳ ಲೇಖಕರ ಪ್ರಕೃತಿ ಕುರಿತ ಪಠ್ಯಗಳನ್ನು ಸಂಯೋಜಿಸಿದೆ

**ಘಟಕ 3 : ಬಾಲ್ಯ**

ಬಾಲ್ಯವು ಮಾನವ ಬದುಕಿನ ಅತ್ಯಂತ ಮುಖ್ಯವಾದ ಮಾತ್ರವಲ್ಲ, ಸುಂದರವಾದ ಘಟ್ಟವೂ ಹೌದು. ಮನುಷ್ಯರ ವ್ಯಕ್ತಿತ್ವವು ಬಾಲ್ಯದ ಧಾತುವಿನಿಂದಲೇ ರೂಪುಗೊಳ್ಳುತ್ತದೆ. 'ಆ ಕಾಲವೊಂದಿತ್ತು ಬಾಲ್ಯ ತಾನಾಗಿತ್ತು ಎನ್ನುವ ಕವಿವಾಣಿಯೂ ಇದನ್ನು ಸಮರ್ಥಿಸುತ್ತದೆ. ಬಾಲ್ಯದ ಮುಗ್ಧತೆ, ನಂಬಿಕೆ, ಕರಾರುಗಳಿಲ್ಲದ ಪ್ರೀತಿ, ಬದುಕಿನ ಪ್ರತಿ ಕ್ಷಣವನ್ನು ಉತ್ಕಟವಾಗಿ ಅನುಭವಿಸುವ ಮನಸ್ಥಿತಿ, ಕ್ಷಮಾಗುಣ, ಕುತೂಹಲ, ಪ್ರಶ್ನೆಗಳನ್ನು ಒಳಗೊಂಡ ಕಾಲವಿದು. ಹೀಗೆ ರಮ್ಯವಾಗಿ ಕಾಣಿಸುವ ಬಾಲ್ಯಕಾಲಕ್ಕೆ ದುರಂತದ ಮುಖವೂ ಇದೆ. ಬಾಲಕಾರ್ಮಿಕರಿಂದ ಹಿಡಿದು, ಶಿಕ್ಷಣ ವಂಚಿತರಾದ ಇನ್ನಿತರ ಹಲವು ಬಗೆಯ ಶೋಷಣೆ ಮತ್ತು ದೌರ್ಜನ್ಯಗಳಿಗೆ ಒಳಗಾಗುವ ಸಂದರ್ಭಗಳನ್ನೂ ಪಠ್ಯದ ತಯಾರಿಯ ಸಂದರ್ಭದ ಗಮನಿಸಬೇಕು. ಬಾಲ್ಯದಲ್ಲಿ ಎದುರಾದ ಹಲವು ಘಟನೆಗಳು ಇಡಿ ಬದುಕಿನ ಮೇಲೆ ಪರಿಣಾಮ ಬೀರುವಷ್ಟು ಪ್ರಬಲವಾಗಿರುತ್ತದೆ. ವ್ಯಕ್ತಿತ್ವವನ್ನು ರೂಪಿಸುವಲ್ಲಿ ಬಾಲ್ಯದ ಪಾತ್ರ ಪ್ರಮುಖವಾದುದು. ಇದೇ ತಾನೇ ಬಾಲ್ಯಾವಸ್ಥೆಯನ್ನು ದಾಟಿ ಹದಿಹರೆಯಕ್ಕೆ ಕಾಲಿಡುತ್ತಿರುವ ಪದವಿ ವಿದ್ಯಾರ್ಥಿಗಳಿಗೆ ತಮ್ಮ ಬಾಲ್ಯ ಬಣ್ಣಗಳನ್ನು ಮೆಲುಕು ಹಾಕುವ ಅವಕಾಶ ನೀಡಿ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ಅವರದೇ ಹೊಸಲೋಕವನ್ನು ಸೃಜಿಸುವಂತೆ ಪ್ರೇರೇಪಿಸುವ ರೀತಿಯ ಪಠ್ಯವನ್ನು ಇಲ್ಲಿ ರೂಪಿಸಿದೆ.

**ಘಟಕ 4 : ಸಂಕೀರ್ಣ**

ಈ ಭಾಗದಲ್ಲಿ ಕಲೆ ಮತ್ತು ಸಾಹಿತ್ಯ, ಕಲೆ ಮತ್ತು ಮನೋವಿಕಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಸಬೇಕು.

ಕಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಪಠ್ಯದಲ್ಲಿಲ್ಲದ ವಿಷಯಗಳನ್ನು ತಿಳಿಸಬೇಕು.

ಇದಕ್ಕೆ ಸಂಬಂಧಿಸಿದ ವಿಶೇಷ ಪಠ್ಯಗಳನ್ನು ಆಧರಿಸಿದಂತೆ ಜ್ಞಾನವನ್ನು ಹೆಚ್ಚಿಸುವುದಕ್ಕೆ ಆದ್ಯತೆ ನೀಡಬೇಕು.

ಪ್ರಥಮ ಚತುರ್ಮಾಸ ಬಿ.ಎ. 2021-22 ನೇ ಸಾಲಿನ ಕನ್ನಡ ಭಾಷ್ಯ ಪಠ್ಯಪುಸ್ತಕ

**NEP ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಅನ್ವಯ**

**ಮಂಗಳೂರು ವಿಶ್ವವಿದ್ಯಾನಿಲಯ**

# ಪ್ರಥಮ ಬಿ.ಎ./ಬಿಎಸ್‌ಡಬ್ಲ್ಯು

# ಬಿ.ಎ.(ಹೆಚ್ಆರ್‌ಡಿ)/ಬಿಎ(ಎಸ್‌ಡಿಎಸ್) ಕನ್ನಡ

ಮೊದಲ ಚತುರ್ಮಾಸ

## ಕಲಾ ಗಂಗೋತ್ರಿ - 1

ಒಟ್ಟು ಕ್ರೆಡಿಟ್‌ಗಳು 3, ಬೋಧನಾ ಅವಧಿ 4+0+0,

ಸೆಮಿಸ್ಟರ್‌ನಲ್ಲಿ ಒಟ್ಟು 100 ಅಂಕಗಳು

ಖಇಇ - ಸೆಮಿಸ್ಟರ್ ಅಂತ್ಯದ ಪರೀಕ್ಷೆ - 60 ಅಂಕಗಳು

ಅಖಇ - ನಿರಂತರ ಆಂತರಿಕ ಮೌಲ್ಯಮಾಪನ - 40 ಅಂಕಗಳು

(ಕನ್ನಡ ನಾಡು ನುಡಿ ಚಿಂತನೆ - ಪ್ರಕೃತಿ - ಬಾಲ್ಯ - ಸಂಕೀರ್ಣ - ಪರಿಕಲ್ಪನೆಗಳನ್ನೊಳಗೊಂಡಂತೆ)

## ಪರಿವಿಡಿ

**ಘಟಕ ಐ ಕನ್ನಡ ನಾಡು ನುಡಿ ಚಿಂತನೆ** — **15 ಅಂಕಗಳು**

1. ಸರಳ ಕನ್ನಡ ಸಾಹಿತ್ಯ ಚರಿತ್ರೆ — ರಂ.ಶ್ರೀ ಮುಗಳಿ - ಸಾಹಿತ್ಯ ಚರಿತ್ರೆ ಆಧಾರಿತ (ಸಂ)
2. ಕನ್ನಡ ನುಡಿ — ಬೆಟಗೇರಿ ಕೃಷ್ಣಶರ್ಮ (ಕಾವ್ಯ)
3. ಆಲೂರು ವೆಂಕಟರಾಯರು — (ಸಾಲುದೀಪ ಕೃತಿಯಿಂದ)
4. ಪಂಜೆ ಮಂಗೇಶರಾಯ — (ಸಾಲುದೀಪ ಕೃತಿಯಿಂದ)

**ಘಟಕ ಐಐ ಪ್ರಕೃತಿ** — **15 ಅಂಕಗಳು**

1. ಗುತ್ತಿ ತಿಮ್ಮಿ - ಹುಲಿಕಲ್ಲುನೆತ್ತಿ- ಮಲೆಗಳಲ್ಲಿ ಮದುಮಗಳು ಆಯ್ದ ಭಾಗ (ಕುವೆಂಪು)
2. ಧ್ಯಾನಸ್ಥ — ಸುಬ್ರಾಯ ಚೊಕ್ಕಾಡಿ (ಕಾವ್ಯ)
3. ಜನಪದ ಕಾವ್ಯ - ನಿಸರ್ಗ (ಜನಪದ ಗೀತಾಂಜಲಿ) ಪು.188-189
4. ಬೆಳಗು — ದ.ರಾ. ಬೇಂದ್ರೆ (ಕಾವ್ಯ)

**ಘಟಕ ಐಐಐ ಬಾಲ್ಯ** — **15 ಅಂಕಗಳು**

1. ಚಂದ್ರಗಿರಿ- ಸಾ.ರಾ. ಅಬೂಬಕ್ಕರ ಅಭಿನಂದನಾ ಗ್ರಂಥದ ಆಯ್ದ ಭಾಗ
2. ನೆನಪಿದೆಯೇ - — ಜಿ.ಎಸ್.ಎಸ್. (ಕಾವ್ಯ)
3. ಊರು ಕೇರಿ — ಸಿದ್ಧಲಿಂಗಯ್ಯನವರ ಆತ್ಮ ಕಥನದ ಆಯ್ದ ಭಾಗ
4. ಉಚಲ್ಯಾ — ಲಕ್ಷ್ಮಣ ರಾವ್ ಗಾಯಕ್‌ವಾಡ್ (ಸಂಗ್ರಹ)

**ಘಟಕ ಐಗಿ ಸಂಕೀರ್ಣ** — **15 ಅಂಕಗಳು**

1. ಸಂಸ್ಕೃತಿ ಸಂಕೇತವಾಗಿ ಹುಲಿ-ದನ — ಡಾ. ಗಣನಾಥ ಎಕ್ಕಾರು
2. ಭಾವುಕತೆ ಕನಸಾಗದಿರಲಿ — ಡಾ. ವಿರೂಪಾಕ್ಷ ದೇವರಮನೆ (ಮನಶ್ಶಾಸ್ತ್ರೀಯ ಲೇಖನ)
3. ಮನೋವಿಜ್ಞಾನದ ಹಾಡು — ಗಂಗಾಧರ ಬೆಳ್ಳಾರೆ
4. ಪತ್ರಿಕಾ ವರದಿ ತಯಾರಿ — ಚಿತ್ರಲೇಖನ -ಪ್ರಬಂಧ ರಚನೆಗಳ ಕುರಿತು ಮಾಹಿತಿ


ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಡಾ. ಎಸ್.ಆರ್. ಅರುಣಕುಮಾರ್, ಶ್ರೀ ಹರೀಶ್ ಟಿ.ಜಿ, ಎಂ.ಡಿ. ಮಂಚಿ**

**ಮಾದರಿ ಪ್ರಶ್ನೆ ಪತ್ರಿಕೆ-ಅಂಕಗಳ ವಿಂಗಡಣೆ-ಒಟ್ಟು ಅಂಕಗಳು-60+40(ಆಂತರಿಕ)**

**ಐ 8 ಅಂಕಗಳ ಒಟ್ಟು 3 ಪ್ರಶ್ನೆಗಳಿಗೆ ಉತ್ತರಿಸುವುದು.** **3ಥ8=24**

1. ಪ್ರಶ್ನೆ 1. ಪದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-ಆದಕ್ಕೆ ಉತ್ತರಿಸುವುದು.
2. ಪ್ರಶ್ನೆ 2 ಗದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು
3. ಪ್ರಶ್ನೆ 3 ಸಂಕೀರ್ಣ(ನಾಟಕ) : ಆಂತರಿಕ ಆಯ್ಕೆಯ ಎರಡು ಪ್ರಶ್ನೆಗಳು.
   -1ಕ್ಕೆ ಉತ್ತರಿಸುವುದು.

**ಐಐ 5 ಅಂಕಗಳ ಒಟ್ಟು 3 ಪ್ರಶ್ನೆಗಳಿಗೆ ಉತ್ತರಿಸುವುದು.** **3ಥ5=15**

1. ಪ್ರಶ್ನೆ 1 ಪದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು
2. ಪ್ರಶ್ನೆ 2 ಗದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು.
3. ಪ್ರಶ್ನೆ 3 ಸಂಕೀರ್ಣ(ನಾಟಕ): ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು

**ಐಐಐ ಪದ್ಯ: ಭಾವಾರ್ಥ ಆಂತರಿಕ ಆಯ್ಕೆ 5 ಅಂಕಗಳ 2 ಪ್ರಶ್ನೆಗಳು**

1ಕ್ಕೆ ಉತ್ತರಿಸುವುದು. **1ಥ5=05**

**ಐಗಿ ಪದ್ಯ : 4 ಅಂಕಗಳ 4 ಪ್ರಶ್ನೆಗಳು**

2ಕ್ಕೆ ಉತ್ತರಿಸುವುದು. **2ಥ4=08**

**ಗಿ 1 ಅಂಕಗಳ 8 ಪ್ರಶ್ನೆಗಳು** **1ಥ8=08**

**ಅ) ಕಾವ್ಯ - 4**
**ಆ) ಗದ್ಯ - 2**
**ಇ) ಸಂಕೀರ್ಣ - 2**

# ಪ್ರಥಮ ಬಿ.ಕಾಂ. ಕನ್ನಡ ಭಾಷಾ ಪಠ್ಯ

ಮೊದಲ ಚತುರ್ಮಾಸ

**:.Com Degree / Honours Degree Programme**

| | |
|---|---|
| Course Title | ಬಿ.ಕಾಂ. - ಕನ್ನಡ ಭಾಷಾ ಪಠ್ಯ |
| Total Contact Hourse : 52 to 56 | Course Credits : 03 |
| Formative Assessment Marks : 40 | Duration of ESA / Exam : 3 hours |
| Model Syllabus Authors : Multiple Authors | Summative Assessment Marks : 60 (SEE) |

| ವಿವರಗಳು | ಬೋಧನಾ ಅವಧಿ |
|---|---|
| ಘಟಕ - 1 ಕನ್ನಡ ನಾಡು ನುಡಿ ಚಿಂತನೆ | 13/14 |
| ಘಟಕ - 2 ಸಂಸ್ಕೃತಿ | 13/14 |
| ಘಟಕ - 3 ಜಾಗತೀಕರಣ | 13/14 |
| ಘಟಕ - 4 ಸಂಕೀರ್ಣ | 13/14 |

**ಘಟಕ -1 ಕನ್ನಡ ನಾಡು-ನುಡಿ-ಚಿಂತನೆ**

ಕನ್ನಡ ನಾಡು ರೂಪುಗೊಂಡದ್ದರಿಂದ ಪ್ರಾರಂಭಿಸಿ ಅದರ ಶ್ರೀಮಂತಿಕೆ, ವೈಶಿಷ್ಟ್ಯತೆ, ಅದರ ಲೋಕದೃಷ್ಟಿ, ಕಲಾ ಪ್ರಕಾರಗಳಲ್ಲಿನ ಸಮೃದ್ಧತೆ, ರಾಜಕೀಯ ಸಾಮಾಜಿಕ ಚಿಂತನೆಗಳ ಸ್ವೋಪಜ್ಞತೆ, ಆದರ ಭೌಗೋಳಿಕ ಸೌಂದರ್ಯ, ವಿವಿಧ ಕ್ಷೇತ್ರಗಳಲ್ಲಿನ ಸಾಧಕರು, ಮಹತ್ತ್ವದ ಚಳುವಳಿಗಳು, ಭಾರತ ಮತ್ತು ವಿಶ್ವಕ್ಕೆ ಕನ್ನಡದ ಕೊಡುಗೆಗಳು ಇವುಗಳಲ್ಲಿ ಕೆಲವನ್ನು ಆಯ್ದು ಪಠ್ಯವನ್ನು ರೂಪಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ನಾಡು-ನುಡಿ ಕುರಿತ ಅಭಿಮಾನವನ್ನು ಜಾಗೃತಗೊಳಿಸುವುದು ಈ ಘಟಕದ ಉದ್ದೇಶವಾಗಿರುತ್ತದೆ.

**ಘಟಕ -2 ಸಂಸ್ಕೃತಿ**

ಸಂಸ್ಕೃತಿಯನ್ನು ಅರ್ನಾಲ್ಡ ಬೆಳಕು ಮತ್ತು ಮಾಧುರ್ಯ ಎಂದು ಕರೆಯುತ್ತಾನೆ. ಮಾನವ ಸಮುದಾಯವು ಅಪಾರ ಶ್ರದ್ಧೆ, ಶ್ರಮ ಮತ್ತು ಪ್ರೀತಿಯಿಂದ ಸಂಸ್ಕೃತಿಯನ್ನು ರೂಪಿಸುತ್ತಿರುತ್ತದೆ. ಸಂಸ್ಕೃತಿ ಎನ್ನುವುದು ಜೀವನ ಮೌಲ್ಯಗಲು, ಕಲೆಗಳು, ಸಾಂಸ್ಕೃತಿಕ ಆಚರಣೆಗಳು, ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆ ಈ ಎಲ್ಲವನ್ನೂ ಒಳಗೊಂಡಿರುತ್ತದೆ. ಬದುಕನ್ನು ಒಳಗಿನಿಂದಲೂ, ಹೊರಗಿನಿಂದಲೂ ಸಮೃದ್ಧಗೊಳಿಸುವ ಎಲ್ಲ ಅಂಶಗಳನ್ನೂ ನಾವು ಸಂಸ್ಕೃತಿ ಎಂದು ಕರೆಯಬಹುದು.ಸಕಲ ಜೀವ ಜಾತರನ್ನು ಗೌರವಿಸುವ, ಒಳಗೊಳ್ಳುವ, ಅವರ ಅಸ್ಮಿತೆ ಮತ್ತು ಅಸ್ತಿತ್ವಗಳನ್ನು ಒಪ್ಪುವುದನ್ನು, ಭಿನ್ನವಿದ್ದೂ ಬೆರೆಯುವುದನ್ನು, ಮಾನವ ಸಹಜ ದೌರ್ಬಲ್ಯಗಳನ್ನು ಮೀರಲು ಪ್ರಾಮಾಣಿಕ ಪ್ರಯತ್ನ ನಡೆಸುವುದನ್ನು ಸಂಸ್ಕೃತಿಯ ಪ್ರಕ್ರಿಯೆ ಎಂದು ಕರೆಯಬಹುದು. ಸಂಸ್ಕೃತಿ ಸಂಬಂಧಿ ಪಠ್ಯಗಳನ್ನು ಇಲ್ಲಿ ಕೊಡುವ ಮೂಲಕ ವಿದ್ಯಾರ್ಥಿಗಳಲ್ಲಿ ಸಂಸ್ಕೃತಿಯ ಬೆಳಕು ಮತ್ತು ಮಾಧುರ್ಯವನ್ನು ಬೆಳೆಸುವ ಉದ್ದೇಶವಿದೆ.

**ಘಟಕ -3 ಜಾಗತೀಕರಣ**

ಜಾಗತೀಕರಣವು ಸಮಕಾಲೀನ ಜಾಗತಿಕ ವಿದ್ಯಮಾನವಾಗಿದ್ದು, ಅದು ಇಂದು ಆಯ್ಕೆಯಾಗಿ ಉಳಿದಿಲ್ಲ. ಅದು ಬೇಕಾಗಿ ಬೇಡವಾಗಿ ಎಲ್ಲ ರಾಷ್ಟ್ರಗಳೂ ಅನಿವಾರ್ಯವಾಗಿ ಒಳಗಾಗುತ್ತಿರುವ ಒಂದು ಪ್ರಕ್ರಿಯೆಯಾಗಿದೆ. ಇಡೀ ವಿಶ್ವವನ್ನೇ 'ಏಕತಾಣ ವಾಗಿ, 'ವಿಶ್ವಹಳ್ಳಿ ಯಾಗಿ ರೂಪಿಸುವುದು ಇದರ ಉದ್ದೇಶವಾಗಿದೆ. ಆದರೆ ಇದರ ಪರಿಣಾಮವು ಮಾತ್ರ ಇದಕ್ಕೆ ವಿರುದ್ಧವಾಗಿದೆ. ಇದರ ಇತ್ಯಾತ್ಮಕ ಮತ್ತು ನೇತ್ಯಾತ್ಮಕ ಅಂಶಗಳನ್ನು ಪಠ್ಯಗಳಾಗಿ ಇಡುವ ಮೂಲಕ ವಿದ್ಯಾರ್ಥಿಗಳಲ್ಲಿ ಸಮಕಾಲೀನ ಆಗುಹೋಗುಗಳನ್ನು ಕುರಿತ ಅರಿವನ್ನು ಹೆಚ್ಚಿಸಬಹುದಾಗಿದೆ. ಸಂಸ್ಕೃತಿಗಳ ವೈವಿಧ್ಯತೆ, ಜೀವಂತಿಕೆಯನ್ನು ನಾಶ ಮಾಡುತ್ತಾ ಏಕರೂಪಿ ಸಂಸ್ಕೃತಿಯನ್ನು ಇದು ರೂಪಿಸುತ್ತಿದೆ. ಆಹಾರ, ವಸ್ತ್ರ, ಕ್ರೀಡೆ, ಸಾಂಸ್ಕೃತಿಕ ಆಚರಣೆಗಳು, ದೈನಂದಿನ ಬಳಕೆಯ ಉತ್ಪನ್ನಗಳು ಈ ಎಲ್ಲದರ ಮೇಲೂ ಬಲಾಢ್ಯ ರಾಷ್ಟ್ರಗಳ ಆಕ್ರಮಣವಾಗುತ್ತಿದೆ ಭಾರತವೂ ಸೇರಿದಂತೆ

ಮೂರನೇ ಜಗತ್ತಿನ ರಾಷ್ಟ್ರಗಳು ಇದರ ಮೂಲ ಬಲಿಪಶುಗಳಾಗುತ್ತಿವೆ ಎನ್ನುವುದನ್ನು ನಾವು ಅವಶ್ಯವಾಗಿ ಗಮನಿಸಬೇಕು. ಅನೇಕತೆಯಲ್ಲಿ ಏಕತೆ ಎನ್ನುವ ಜನತಾಂತ್ರಿಕ ಆಶಯಕ್ಕೆ ವಿರುದ್ಧವಾಗಿ ಏಕತೆಯ ದಬ್ಬಾಳಿಕೆಯ ಮೂಲಕ ಅನೇಕ ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳನ್ನೇ ನಾಶ ಮಾಡುವ ಮೂಲಕ ಹಲವು ವೃತ್ತಿಗಳನ್ನೇ ಇದು ವಿನಾಶದಂಚಿಗೆ ತಳ್ಳುತ್ತಿದೆ ಎನ್ನುವ ಅಂಶವನ್ನೂ ಗಮನಿಸಬೇಕು. ಅಮಾನವೀಯ ಮನೋವಿನ್ಯಾಸವನ್ನೂ ಏಕರೂಪ ವಿನ್ಯಾಸ ಇದು ರೂಪಿಸುತ್ತಿದೆ. ಇಲ್ಲಿ ಮನೋವಿನ್ಯಾಸದ ಅಪಾಯಗಳನ್ನು ಮನವರಿಕೆ ಮಾಡಿಸುವ ವೈವಿಧ್ಯಮಯವಾದ ಮತ್ತು ಬಹುತ್ವದ ಜೀವಂತಿಕೆಯನ್ನು ವೇದ್ಯಗೊಳಿಸುವ ಪಠ್ಯಗಳನ್ನು ಇಲ್ಲಿ ಕೊಡಲಾಗುವುದು.

**ಘಟಕ -4 ಸಂಕೀರ್ಣ**

ಸಾಹಿತ್ಯ ಮತ್ತು ವಾಣಿಜ್ಯ ಅಂಶಗಳ ಸಂಬಂಧಗಳು, ಕನ್ನಡ ಸಾಹಿತ್ಯದಲ್ಲಿ ಚಿತ್ರಿತವಾಗಿರುವ ವ್ಯಾಪಾರಿ, ವ್ಯಾಪಾರ ಮನೋಭಾವ ವ್ಯಾಪಾರದಲ್ಲಿ ಧರ್ಮ, ಮಾನವೀಯತೆಯ ಚಿತ್ರಣಗಳು.
ಕನ್ನಡ ಸಾಹಿತ್ಯದ ವಿವಿಧ ಪ್ರಕಾರಣಗಳಲ್ಲಿ ಬಿಂಬಿತವಾಗಿರುವ ವಾಣಿಜ್ಯ ಮತ್ತು ಸಂಬಂದಿತ ಅಂಶಗಳನ್ನು ಬೋಧಿಸುವುದು.

# NEP ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಅನ್ವಯ

**ಮಂಗಳೂರು ವಿಶ್ವವಿದ್ಯಾನಿಲಯ**

# ಪ್ರಥಮ ಬಿ.ಕಾಂ. ಕನ್ನಡ

ಮೊದಲ ಚತುರ್ಮಾಸ

## ವಾಣಿಜ್ಯ ಗಂಗೋತ್ರಿ - 1

ಒಟ್ಟು ಕ್ರೆಡಿಟ್‌ಗಳು 3, ಬೋಧನಾ ಅವಧಿ 4+0+0,

ಸೆಮಿಸ್ಟರ್‌ನಲ್ಲಿ ಒಟ್ಟು 100 ಅಂಕಗಳು

ಖಇಇ - ಸೆಮಿಸ್ಟರ್ ಅಂತ್ಯದ ಪರೀಕ್ಷೆ - 60 ಅಂಕಗಳು

ಅಖಇ - ನಿರಂತರ ಆಂತರಿಕ ಮೌಲ್ಯಮಾಪನ - 40 ಅಂಕಗಳು

(ಕನ್ನಡ ನಾಡು ನುಡಿ ಚಿಂತನೆ - ಸಂಸ್ಕೃತಿ-ಜಾಗತೀಕರಣ - ಸಂಕೀರ್ಣ)

## ಪರಿವಿಡಿ

| | | |
|---|---|---|
| **ಘಟಕ ಐ ಕನ್ನಡ ನಾಡು-ನುಡಿ** | | **15 ಅಂಕಗಳು** |
| 1. ನಾಡು ನುಡಿ (ಕವಿರಾಜಮಾರ್ಗ) (15 ಪದ್ಯಗಳು) (ಕಾವ್ಯ) | | |
| 2. ಕನ್ನಡ ತಾಯ ನೋಟ | ಬಿಎಂಶ್ರೀ (ಕಾವ್ಯ) | |
| 3. ಕನ್ನಡ ಸಾಹಿತ್ಯ ಚರಿತ್ರೆ (ಹೊಸಗನ್ನಡ ಸಂಕ್ಷಿಪ್ತ ಪರಿಚಯ) (ಲೇಖನ) | | |
| 4. ನನ್ನ ಕನ್ನಡ ಜಗತ್ತು | ಕೆ.ವಿ. ಸುಬ್ಬಣ್ಣ (ಲೇಖನ) | |
| **ಘಟಕ ಐಐ ಸಂಸ್ಕೃತಿ** | | **15 ಅಂಕಗಳು** |
| 1 ಮುತ್ತೈದೆ ಸಾವು | ಜಿ.ಪಿ. ರಾಜರತ್ನಂ (ಕಾವ್ಯ) | |
| 2 ಗಂಗಾಮಾಯಿ | ಡಾ. ಚಂದ್ರಶೇಖರ ಕಂಬಾರ (ಕಾವ್ಯ) | |
| 3. ಸಂಸ್ಕೃತಿ ಚಿಂತನೆ | ದೇವುಡು (ಲೇಖನ) | |
| 4. ಬಿಳಿಗಿರಿ ರಂಗ | ಮಾಸ್ತಿ (ಕಥೆ) | |
| **ಘಟಕ ಐಐಐ ಜಾಗತೀಕರಣ** | | **15 ಅಂಕಗಳು** |
| 1. ದಿಕ್ಕು | ಪ್ರತಿಭಾ ನಂದಕುಮಾರ್ (ಕಾವ್ಯ) | |
| 2. ನನ್ನ ಅವತಾರ | ಗೋಪಾಲಕೃಷ್ಣ ಅಡಿಗ (ಕಾವ್ಯ) | |
| 3. ಜಾಗತೀಕರಣದ ಸಾಂಸ್ಕೃತಿಕ ನೆಲೆ | ಎಸ್.ಆರ್. ವಿಜಯಶಂಕರ (ಲೇಖನ) | |
| 4. ಹಕ್ಕಿ ಮತ್ತು ಅವಳು | ಮಿತ್ರಾ ವೆಂಕಟರಾಜ್ (ಕಥೆ) | |
| **ಘಟಕ ಐಗಿ ಸಂಕೀರ್ಣ** | | **15 ಅಂಕಗಳು** |
| 1. ಕಾಸು ಕುಡಿಕೆ | ಜಯದೇವ ಪ್ರಸಾದ್ ಮೊಳೆಯಾರ್ (ಸಂಗ್ರಹ) | |
| 2. ನಾವೇಕೆ ಆಸಾಮಿಗಳಾಗಬಾರದು | ನಾರಾಯಣ ಶೇವಿರೆ | |
| 3. ವಾಣಿಜ್ಯ ಪದಕೋಶ (ಸಂಗ್ರಹ) | | |
| 4. ಕೆ.ಎಸ್. ಹೆಗ್ಡೆ ಸಾಧನೆ | ಶ್ರೀ ಮುದ್ರಾಡಿ | |

ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**

ಕಾರ್ಯನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**

ಸಂಪಾದಕರು : **ಶ್ರೀ ನೇಮಿಚಂದ್ರ ಗೌಡ, ಡಾ. ಜ್ಯೋತಿಪ್ರಿಯ, ಶ್ರೀ ಸಂತೋಷ ಆಳ್ವ**

## ಮಾದರಿ ಪ್ರಶ್ನೆ ಪತ್ರಿಕೆ-ಅಂಕಗಳ ವಿಂಗಡಣೆ-ಒಟ್ಟು ಅಂಕಗಳು-60+40(ಆಂತರಿಕ)

**ಐ 8 ಅಂಕಗಳ ಒಟ್ಟು 3 ಪ್ರಶ್ನೆಗಳಿಗೆ ಉತ್ತರಿಸುವುದು.** **3φ8=24**

1. ಪ್ರಶ್ನೆ 1. ಪದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-ಅದಕ್ಕೆ ಉತ್ತರಿಸುವುದು.
2. ಪ್ರಶ್ನೆ 2 ಗದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು
3. ಪ್ರಶ್ನೆ 3 ಸಂಕೀರ್ಣ(ನಾಟಕ) : ಆಂತರಿಕ ಆಯ್ಕೆಯ ಎರಡು ಪ್ರಶ್ನೆಗಳು.
   -1ಕ್ಕೆ ಉತ್ತರಿಸುವುದು.

**ಐಐ 5 ಅಂಕಗಳ ಒಟ್ಟು 3 ಪ್ರಶ್ನೆಗಳಿಗೆ ಉತ್ತರಿಸುವುದು.** **3φ5=15**

1. ಪ್ರಶ್ನೆ 1 ಪದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು
2. ಪ್ರಶ್ನೆ 2 ಗದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು.
3. ಪ್ರಶ್ನೆ 3 ಸಂಕೀರ್ಣ(ನಾಟಕ): ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು

**ಐಐಐ ಪದ್ಯ: ಭಾವಾರ್ಥ ಆಂತರಿಕ ಆಯ್ಕೆ 5 ಅಂಕಗಳ 2 ಪ್ರಶ್ನೆಗಳು**

1ಕ್ಕೆ ಉತ್ತರಿಸುವುದು. **1φ5=05**

**ಐಗ ಪದ್ಯ : 4 ಅಂಕಗಳ 4 ಪ್ರಶ್ನೆಗಳು**

2ಕ್ಕೆ ಉತ್ತರಿಸುವುದು. **2φ4=08**

**ಗ 1 ಅಂಕಗಳ 8 ಪ್ರಶ್ನೆಗಳು** **1φ8=08**

**ಅ) ಕಾವ್ಯ - 4**

**ಆ) ಗದ್ಯ - 2**

**ಇ) ಸಂಕೀರ್ಣ - 2**

# ಪ್ರಥಮ ಬಿ.ಬಿ.ಎ. ಕನ್ನಡ ಭಾಷಾ ಪಠ್ಯ

ಮೊದಲ ಚತುರ್ಮಾಸ

**B.B.A Degree / Honours Degree Programme**

| | |
|---|---|
| Course Title | ಬಿ.ಬಿ.ಎ. -<br>ಕನ್ನಡ ಭಾಷಾ ಪಠ್ಯ ವ್ಯವಹಾರ ನಿರ್ವಹಣಾ ಕನ್ನಡ |
| Total Contact Hourse : 52 to 56 | Course Credits : 03 |
| Formative Assessment Marks : 40(CIE) | Duration of ESA / Exam : 3 hours |
| Model Syllabus Authors : Multiple Authors | Summative Assessment Marks : 60 (SEE) |

| ವಿವರಗಳು | ಬೋಧನಾ ಅವಧಿ |
|---|---|
| ಘಟಕ - 1 ಕನ್ನಡ ನಾಡು ನುಡಿ ಚಿಂತನೆ | 13/14 |
| ಘಟಕ - 2 ಆಧುನಿಕತೆ | 13/14 |
| ಘಟಕ - 3 ಕುಟುಂಬ | 13/14 |
| ಘಟಕ - 4 ಸಂಕೀರ್ಣ | 13/14 |

**ಘಟಕ -1 ಕನ್ನಡ ನಾಡು-ನುಡಿ-ಚಿಂತನೆ**

ಪದವಿ ಪಠ್ಯಗಳಲ್ಲಿ ಕನ್ನಡ ನಾಡು ನುಡಿ ಚಿಂತನೆಗಳು ಮತ್ತು ಕನ್ನಡ ಭಾಷಾ ಸಂಸ್ಕೃತಿಗೆ ಇರುವ ಬಹುಮುಖಿ ಆಯಾಮಗಳನ್ನು ಪರಿಗಣಿಸಿ ಘಟಕ-1 ಅನ್ನು ರೂಪಿಸಲಾಗಿದೆ. ರಾಷ್ಟ್ರಕವಿ ಕುವೆಂಪು ಅವರ ಕನ್ನಡ ಡಿಂಡಿಮ - ಮುನ್ನುಡಿ ಲೇಖನ. ಡಾ. ಹಾ.ಮಾ. ನಾಯಕರವರ 'ಕನ್ನಡ ಕಟ್ಟುವ ಕೆಲಸ ಲೇಖನ ಮತ್ತು ಹುಯಿಲಗೋಳ ನಾರಾಯಣ ರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು - ಕವನವನ್ನು ಅಧ್ಯಯನಕ್ಕೆ ಇಡಲಾಗಿದೆ. ಇದರಿಂದ ಕನ್ನಡ ನಾಡು-ನುಡಿಯ ಬಗ್ಗೆ ಹೆಚ್ಚಿನ ಅಭಿಮಾನ ಮೂಡುವುದಲ್ಲದೇ ಕನ್ನಡದ ಹಿರಿಮೆ-ಗರಿಮೆಯನ್ನು ಪರಿಚಯಿಸಲಾಗುತ್ತದೆ.

**ಘಟಕ -2 ಆಧುನಿಕತೆ**

ಕಳೆದ ಶತಮಾನದಿಂದ ಜಗತ್ತು ಆಧುನಿಕತೆಯ ಜೊತೆಗೆ ಮುಖಾಮುಖಿಯನ್ನು ನಡೆಸುತ್ತಲೇ ಬಂದಿದೆ. ಆಧುನಿಕತೆಯು ಆಕರ್ಷಣೆಯೂ ಹೌದು. ಬದಲಾವಣೆಯ ಪ್ರಕ್ರಿಯೆಯೂ ಹೌದು. ಸವಾಲು ಹೌದು, ದುರಂತವೂ ಹೌದು. ಮುಖ್ಯವಾಗಿ ಮೂರನೆಯ ಜಗತ್ತಿನ ರಾಷ್ಟ್ರಗಳ ವಿಷಯದಲ್ಲಿ ಇದು ಇನ್ನೂ ಹೆಚ್ಚು ಸಂಕೀರ್ಣವಾಗಿದೆ. ಆಧುನಿಕತೆಯು ಸಾಮಾಜಿಕ ತರತಮಗಳನ್ನು ನಿವಾರಿಸಿಕೊಳ್ಳಲು ಇರುವ ಪರಿಹಾರ ಮಾರ್ಗ ಎಂದೇ ಭಾವಿಸಲಾಗಿತ್ತು. ಕಾಲಕ್ರಮೇಣ ಆಧುನಿಕ ವಿದ್ಯಮಾನಗಳು ಶ್ರೇಣೀಕರಣವನ್ನು ಇನ್ನೂ ಬಲಪಡಿಸುತ್ತಿವೆ ಎನ್ನುವ ಸತ್ಯ ಈಗ ಬಯಲಾಗುತ್ತಿದೆ. ಆಧುನಿಕತೆಯ ಪರ ಮತ್ತು ವಿರೋಧದ ಅಂಶಗಳಿಗಿರುವ ಪಠ್ಯಗಳನ್ನು ಸಂಯೋಜಿಸಿದರೆ ವಿದ್ಯಾರ್ಥಿಗಳಿಗೆ ಆಧುನಿಕತೆಯ ಸ್ಪಷ್ಟ ಚಿತ್ರಣ ಸಿಗುತ್ತದೆ.

**ಘಟಕ -3 ಕುಟುಂಬ**

ಸಮಾಜದ ಮೂಲ ಘಟಕ ಕುಟುಂಬ, ಸಮಾಜದ ಎಲ್ಲ ಸಂಸ್ಥೆಗಳೂ (ದಾಂಪತ್ಯ, ಸ್ನೇಹ, ಪ್ರಭುತ್ವ ಮೌಲ್ಯ ವ್ಯವಸ್ಥೆ ಇತ್ಯಾದಿ) ಹುಟ್ಟುವುದೇ ಈ ಮೂಲ ಘಟಕದಿಂದ ಕುಟುಂಬದ ಆಧಾರ ಸ್ತಂಭವಾಗಿ ಗಂಡ-ಹೆಂಡತಿಯನ್ನು ಗುರುತಿಸಲಾಗುತ್ತಿದೆ ಎನ್ನುವುದು ನಿಜವಾದರೂ, ಅಲ್ಲಿ ಗಂಡಾಳಿಕೆಯ ವ್ಯವಸ್ಥೆಯಲ್ಲಿ ಅದು ಶ್ರೇಣೀಕೃತ ಸಮೀಕರಣವಾಗುತ್ತದೆ. ಗಂಡು ಕೇಂದ್ರದಲ್ಲಿದ್ದರೆ "ಹೆಣ್ಣು ಅಂಚಿನಲ್ಲಿರುವ ಸ್ಥಿತಿ ಇದಕ್ಕೊಂಡು

ವಿಷಮತೆಯನ್ನು ತರುತ್ತದೆ. ಇದರ ಜೊತೆ ಜೊತೆಗೇ ಹೆಣ್ಣು ಕುಟುಂಬದ ಕಣ್ಣು ಎನ್ನುವ ಧೋರಣೆಯೂ ಅಷ್ಟೇ ಪ್ರಬಲವಾಗಿ ಚಾಲ್ತಿಯಲ್ಲಿದೆ. ಮಕ್ಕಳ ಮೇಲಿನ ಮೊದಲು ಮತ್ತು ಗಾಢವಾದ ಪ್ರಭಾವ ಕುಟುಂಬದ್ದೇ ಆಗಿರುತ್ತದೆ. ತಾಳ್ಮೆ, ಪ್ರೀತಿ, ತ್ಯಾಗ, ಶ್ರಮ, ಸಹಿಷ್ಣುತೆ, ಒಗ್ಗಟ್ಟು ಇತ್ಯಾದಿ ಗುಣಗಳನ್ನೆಲ್ಲ ನಾವು ಕಲಿಯುವುದು ಕುಟುಂಬ ವ್ಯವಸ್ಥೆಯಿಂದಲೇ, ಸಮಾಜದ ಮೂಲ ಘಟಕ ಕುಟುಂಬ ಎಂಬ ಧ್ಯೇಯದೊಂದಿಗೆ ಶಿವರಾಮ ಕಾರಂತರ ಬೆಟ್ಟದ ಜೀವ ಕಾದಂಬರಿಯ ಆಯ್ದ ಭಾಗ ಪಠ್ಯವನ್ನು ಇಡಲಾಗಿದೆ. ಈ ಭಾಗದಲ್ಲಿ ಕೌಟುಂಬಿಕ ಪರಿಸರದ ಚಿತ್ರಣ, ಸ್ನೇಹ ಹಾಗೂ ಕುಟುಂಬದ ಆಧಾರ ಸ್ಥಂಭವಾಗಿ ಕುಟುಂಬದ ಯಜಮಾನನನ್ನು ಗುರುತಿಸಲಾಗುತ್ತದೆ. ಬಡ ಹೆಣ್ಣುಮಗಳ ಮದುವೆ ಸಂದರ್ಭದಲ್ಲಿ ಎದುರಾಗಬಹುದಾದ ಸಮಸ್ಯೆಗಳ ಒಳನೋಟದ ಚಿತ್ರಣವಿದೆ. ಕಣಿವೆಯ ಮುದುಕ ಕವಿತೆಯಲ್ಲಿ ವಿಶ್ವ ಕುಟುಂಬಿಯ ಕಷ್ಟದಲ್ಲಿ ಈ ಭಾವದ ನೆಲೆ ಇದರಷ್ಟೇ ಸ್ವಾಭಾವಿಕವಾಗಿ ದೈವವನ್ನು ಚಿತ್ರಿಸಿದ್ದಾರೆ. ಕುಟುಂಬ ವ್ಯವಸ್ಥೆಯ ದಿಕ್ಕು-ದೆಸೆಗಳನ್ನು ಒಳಗೊಳ್ಳುವ ಪಠ್ಯಗಳನ್ನು ಸಾಹಿತ್ಯ ಮತ್ತು ಸಾಹಿತ್ಯೇತರ ಮೂಲಗಳಿಂದ ಸಂಗ್ರಹಿಸಿ ಪಠ್ಯಗಳನ್ನು ರೂಪಿಸಬಹುದು.

**ಘಟಕ -4 ಸಂಕೀರ್ಣ**

ವಿದ್ಯಾರ್ಥಿಗಳಲ್ಲಿ ಮಾನವೀಯತೆಯ ವ್ಯವಹಾರಿಕ ದೃಷ್ಟಿಕೋನವನ್ನು ಬೆಳೆಸುವುದು. ವ್ಯವಹಾರದಲ್ಲಿ ಮೌಲ್ಯಾಧಾರಿತ ಗುಣಗಳನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು. ವ್ಯವಹಾರ ಮತ್ತು ಸ್ವಸ್ಥ ಬದುಕಿನ ನಿಜ ಅರ್ಥವನ್ನು ತಿಳಿಸುವುದು. ವಿದ್ಯಾರ್ಥಿಗಳಲ್ಲಿ ಮಾನವೀಯತೆ ವ್ಯವಹಾರಿಕ ದೃಷ್ಟಿಕೋನ ಹಾಗೂ ವ್ಯವಹಾರದಲ್ಲಿ ಮೌಲ್ಯಾಧಾರಿತ ಗುಣಗಳನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವ ನಿಟ್ಟಿನಲ್ಲಿ ಲೇಖನವನ್ನು ಅಧ್ಯಯನಕ್ಕೆ ಇಡಲಾಗಿದೆ.

## NEP ರಾಷ್ಟ್ರೀಯ ಶಿಕ್ಷಣ ನೀತಿ - 2020ರ ಅನ್ವಯ

ಮಂಗಳೂರು ವಿಶ್ವವಿದ್ಯಾನಿಲಯ

# ಪ್ರಥಮ ಬಿ.ಬಿ.ಎ. ಕನ್ನಡ

ಮೊದಲ ಚತುರ್ಮಾಸ

# ನಿರ್ವಹಣಾ ಗಂಗೋತ್ರಿ - 1

ಮೊದಲ ಚತುರ್ಮಾಸ

ಒಟ್ಟು ಕ್ರೆಡಿಟ್‌ಗಳು 3, ಬೋಧನಾ ಅವಧಿ 4+0+0,
ಸೆಮಿಸ್ಟರ್‌ನಲ್ಲಿ ಒಟ್ಟು 100 ಅಂಕಗಳು
ಖಇಇ - ಸೆಮಿಸ್ಟರ್ ಅಂತ್ಯದ ಪರೀಕ್ಷೆ - 60 ಅಂಕಗಳು
ಅಖಇ - ನಿರಂತರ ಆಂತರಿಕ ಮೌಲ್ಯಮಾಪನ - 40 ಅಂಕಗಳು
(ಕನ್ನಡ ನಾಡು ನುಡಿ ಚಿಂತನೆ - ಆಧುನಿಕತೆ - ಕುಟುಂಬ - ಸಂಕೀರ್ಣ)

## ಪರಿವಿಡಿ

**ಘಟಕ ಐ ನಾಡು ನುಡಿಯ ಚಿಂತನೆ** — **15 ಅಂಕಗಳು**

| | |
|---|---|
| 1. ನಮ್ಮ ಹೆಮ್ಮೆಯ ಕನ್ನಡ ಪರಂಪರೆ | ಡಾ. ಕಾಳೇಗೌಡ ನಾಗವಾರ |
| 2. ಮಂಗಲ ಗೀತೆ | ಕಡೆಂಗೋಡ್ಲು ಶಂಕರ ಭಟ್ಟ |
| 3. ಬೆಂಕಿ ಬಿದ್ದಿದೆ ಮನೆಗೆ | ಕಯ್ಯಾರ ಕಿಞ್ಞಣ್ಣ ರೈ |
| 4. ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು | ಆಂಡಯ್ಯ (ಕಬ್ಬಿಗರ ಕಾವ) |

**ಘಟಕ ಐಐ ಆಧುನಿಕತೆ** — **15 ಅಂಕಗಳು**

| | |
|---|---|
| 1. ಮನೆಯಿಂದ ಮನೆಗೆ | ಕೆ.ಎಸ್. ನರಸಿಂಹಸ್ವಾಮಿ (ಕಾವ್ಯ) |
| 2. ಕುರುಡು ಕಾಂಚಾಣ | ದ.ರಾ. ಬೇಂದ್ರೆ (ಕಾವ್ಯ) |
| 3. ಲೂಟಿಯ ಹೆದ್ದಾರಿಗಳು | ನಾಗೇಶ್ ಹೆಗಡೆ (ಲೇಖನ) |
| 4. ಗೇಣಿದಾರರ ಏಣಿಯಾಟ | ನಾಗವೇಣಿ ಎಚ್. (ಲೇಖನ) |

**ಘಟಕ ಐಐಐ ಕುಟುಂಬ** — **15 ಅಂಕಗಳು**

| | |
|---|---|
| 1. ಮೊಸರಿನ ಮಂಗಮ್ಮ | ಮಾಸ್ತಿ (ಸಣ್ಣ ಕತೆ) |
| 2. ತೊಟ್ಟಿಲು ತೂಗಿತು | ತ.ರಾ.ಸು (ಕತೆ) |
| 3. ಹದಿಬದೆಯ ಧರ್ಮ | ಆಯ್ದ ಪದಗಳು |
| 4. ಜನಪದ ತ್ರಿಪದಿಗಳು (ತಾಯಿ-ಮಗು, ಪತಿ-ಪತ್ನಿ, ಸಹೋದರತೆ, ತವರು) | |

**ಘಟಕ ಐಗಿ ಸಂಕೀರ್ಣ** — **15 ಅಂಕಗಳು**

| | |
|---|---|
| 1. ಸೃಜನಶೀಲತೆ ಮತ್ತು ಆವಿಷ್ಕಾರ | (ಅನುವಾದ ಲೇಖನ) (ಅಬ್ದುಲ್ ಕಲಾಂ- ಅನು : ಮಧ್ಯಸ್ಥ) |
| 2. ಕೊಳ್ಳುಬಾಕತನ ಸಂಸ್ಕೃತಿ ಬದಲಾವಣೆ ತಂದ ಪ್ರೇಮ | ಗುರುರಾಜ ಕರ್ಜಗಿ (ಲೇಖನ) |
| 3. ಇತಿಹಾಸ ಎಂಬ ಗುರು | ಸುಧಾಮೂರ್ತಿ (ಲೇಖನ) |
| 4. ಇಬ್ಬರು ರೈತರು | ಸುಂ.ರಂ ಎಕ್ಕುಂಡಿ (ಕಾವ್ಯ) |


ಪ್ರಧಾನ ಸಂಪಾದಕರು : **ಪ್ರೊ. ಸೋಮಣ್ಣ**
ಕಾರ್ಯನಿರ್ವಾಹಕ ಸಂಪಾದಕರು : **ಡಾ. ಮಾಧವ ಎಂ.ಕೆ.**
ಸಂಪಾದಕರು : **ಡಾ. ಡಿ.ಕೆ. ಸರಸ್ವತಿ, ಡಾ. ಸೌಮ್ಯಲತಾ ಪಿ., ಶ್ರೀ ರಘುರಾಜ್**

**ಮಾದರಿ ಪ್ರಶ್ನೆ ಪತ್ರಿಕೆ-ಅಂಕಗಳ ವಿಂಗಡಣೆ-ಒಟ್ಟು ಅಂಕಗಳು-60+40(ಆಂತರಿಕ)**

**ಐ 8 ಅಂಕಗಳ ಒಟ್ಟು 3 ಪ್ರಶ್ನೆಗಳಿಗೆ ಉತ್ತರಿಸುವುದು. 3ಥ8=24**

1. ಪ್ರಶ್ನೆ 1. ಪದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-ಅದಕ್ಕೆ ಉತ್ತರಿಸುವುದು.
2. ಪ್ರಶ್ನೆ 2 ಗದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು
3. ಪ್ರಶ್ನೆ 3 ಸಂಕೀರ್ಣ(ನಾಟಕ) : ಆಂತರಿಕ ಆಯ್ಕೆಯ ಎರಡು ಪ್ರಶ್ನೆಗಳು.
   -1ಕ್ಕೆ ಉತ್ತರಿಸುವುದು.

**ಐಐ 5 ಅಂಕಗಳ ಒಟ್ಟು 3 ಪ್ರಶ್ನೆಗಳಿಗೆ ಉತ್ತರಿಸುವುದು. 3ಥ5=15**

1. ಪ್ರಶ್ನೆ 1 ಪದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು
2. ಪ್ರಶ್ನೆ 2 ಗದ್ಯ : ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು.
3. ಪ್ರಶ್ನೆ 3 ಸಂಕೀರ್ಣ(ನಾಟಕ): ಆಂತರಿಕ ಆಯ್ಕೆಯ 2 ಪ್ರಶ್ನೆಗಳು-1ಕ್ಕೆ ಉತ್ತರಿಸುವುದು

**ಐಐಐ ಪದ್ಯ: ಭಾವಾರ್ಥ ಆಂತರಿಕ ಆಯ್ಕೆ 5 ಅಂಕಗಳ 2 ಪ್ರಶ್ನೆಗಳು**

1ಕ್ಕೆ ಉತ್ತರಿಸುವುದು. **1ಥ5=05**

**ಐಗಿ ಪದ್ಯ : 4 ಅಂಕಗಳ 4 ಪ್ರಶ್ನೆಗಳು**

2ಕ್ಕೆ ಉತ್ತರಿಸುವುದು. **2ಥ4=08**

**ಗಿ 1 ಅಂಕಗಳ 8 ಪ್ರಶ್ನೆಗಳು 1ಥ8=08**

**ಅ) ಕಾವ್ಯ - 4**

**ಆ) ಗದ್ಯ - 2**

**ಇ) ಸಂಕೀರ್ಣ - 2**